85-K

# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

**6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003**

**KARNATAKA SCHOOL EXAMINATION AND ASSESSMENT BOARD**
**6th Cross, Malleshwaram, Bengaluru – 560 003**

## 2025–26 ರ ಎಸ್.ಎಸ್.ಎಲ್.ಸಿ. ಮಾದರಿ ಪ್ರಶ್ನೆಪತ್ರಿಕೆ – 2

## S.S.L.C. MODEL QUESTION PAPER - 2 : 2025 - 26

## ವಿಷಯ : ಸಮಾಜವಿಜ್ಞಾನ

## Subject : SOCIAL SCIENCE

**ವಿಷಯ ಸಂಕೇತ : 85-K** **Subject Code : 85-K**

ಸಮಯ : 3 ಗಂಟೆ 15 ನಿಮಿಷಗಳು ] [ Time : 3 Hours 15 Minutes

ಗರಿಷ್ಠ ಅಂಕಗಳು : 80 ] [ Max. Marks : 80

**ಪರೀಕ್ಷಾರ್ಥಿಗಳಿಗಾಗಿ ಸಾಮಾನ್ಯ ಸೂಚನೆಗಳು :**

1. ಈ ಪ್ರಶ್ನೆಪತ್ರಿಕೆಯು ಒಟ್ಟು 38 ಪ್ರಶ್ನೆಗಳನ್ನು ಹೊಂದಿದೆ.
2. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
3. ಬಲಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
4. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವೂ ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

[ Turn over

**I. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೆ / ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಒಂದು ಮಾತ್ರ ಸರಿಯಾಗಿದೆ ಅಥವಾ ಹೆಚ್ಚು ಸೂಕ್ತವಾಗಿದೆ. ಸರಿಯಾದ ಉತ್ತರವನ್ನು ಆರಿಸಿ, ಪೂರ್ಣ ಉತ್ತರವನ್ನು ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ. 8x1=8**

1. ಹದಿನಾಡು ಎಂಬ ಪಾಳೆಪಟ್ಟಿನ ಮಹಾರಾಣಿಯು ತನ್ನ ಮಗಳನ್ನು ಯದುರಾಯನಿಗೆ ಕೊಟ್ಟು ಮದುವೆ ಮಾಡಿದಳು, ಏಕೆಂದರೆ

A) ಮಾರನಾಯಕನು ಯದುರಾಯನಿಗೆ ಮಗಳನ್ನು ಕೊಡಬೇಕೆಂದು ಮಹಾರಾಣಿಗೆ ಆಜ್ಞೆ ಮಾಡಿದನು

B) ಯದುರಾಯನು ಸುಂದರನಾಗಿದ್ದನು ಮತ್ತು ಮಹಾರಾಣಿಯ ಮಗಳು ಅವನನ್ನು ಪ್ರೀತಿಸುತ್ತಿದ್ದಳು

C) ಯದುರಾಯನು ಮಗಳನ್ನು ಕೊಡುವಂತೆ ಮಹಾರಾಣಿಯನ್ನು ಒತ್ತಾಯಿಸಿದನು

D) ಯದುರಾಯನು ಮಾರನಾಯಕನನ್ನು ಕೊಂದು ಮಹಾರಾಣಿಗೆ ಸಹಾಯ ಮಾಡಿದನು

2. ಎರಡನೇ ಮಹಾಯುದ್ಧವು ಕೊನೆಗೊಂಡ ವರ್ಷ

A) 1939

B) 1941

C) 1943

D) 1945

3. ವಿಶ್ವಸಂಸ್ಥೆಯ ಮುಖ್ಯ ಕಛೇರಿ ಇರುವುದು

A) ಹೇಗ್ ಪಟ್ಟಣದಲ್ಲಿ

B) ಜಿನೇವಾದಲ್ಲಿ

C) ವಾಷಿಂಗ್ಟನ್ನಲ್ಲಿ

D) ನ್ಯೂಯಾರ್ಕ್‌ನಲ್ಲಿ

4. ನರ್ಮದಾ ಬಚಾವೋ ಆಂದೋಲನದ ನೇತೃತ್ವ ವಹಿಸಿದ್ದವರು

A) ಶಿವರಾಮ ಕಾರಂತರು

B) ಸುಂದರಲಾಲ್ ಬಹುಗುಣ

C) ಮೇಧಾ ಪಾಟ್ಕರ್

D) ಚಂಡಿಪ್ರಸಾದ ಭಟ್ಟ

5. ಪಶ್ಚಿಮ ಬಂಗಾಳದಲ್ಲಿ ಉಂಟಾಗುವ ಪರಿಸರಣ ಮಳೆ

A) ಆಂಧೀಸ್

B) ಕಾಲ ಬೈಸಾಕಿ

C) ಕಾಫಿ ತುಂತುರು

D) ಮಾವಿನಹೊಯ್ಲು

6. ನವಶೇವ ಬಂದರನ್ನು ನಿರ್ಮಿಸಲು ಕಾರಣ

A) ಅಪಾರ ಪ್ರಮಾಣದಲ್ಲಿ ಚಹವನ್ನು ರಫ್ತು ಮಾಡಲು

B) ಭಾರತದ ಪಶ್ಚಿಮ ಕರಾವಳಿಯಲ್ಲಿ ನೌಕಾನೆಲೆಯನ್ನು ಪ್ರಾರಂಭಿಸಲು

C) ಮುಂಬೈ ಬಂದರು ಮೇಲಿನ ಹೆಚ್ಚಿನ ಒತ್ತಡವನ್ನು ನಿವಾರಿಸಲು

D) ಭಾರತದ ಪೂರ್ವ ಕರಾವಳಿಯಲ್ಲಿ ಜಲಸಾರಿಗೆಯನ್ನು ಉತ್ತೇಜಿಸಲು

7. ವಸತಿಹೀನರಿಗೆ ಮನೆಗಳನ್ನು ನಿರ್ಮಿಸಿಕೊಡಲು ಜಾರಿಗೆ ತಂದಿರುವ ಯೋಜನೆ

A) ಆಶ್ರಯ ಯೋಜನೆ

B) ಸಂಧ್ಯಾ ಸುರಕ್ಷಾ ಯೋಜನೆ

C) ಸುಕನ್ಯಾ ಸಮೃದ್ಧಿ ಯೋಜನೆ

D) ಜವಹಾರ್ ರೋಜ್‌ಗಾರ್ ಯೋಜನೆ

8. ಭಾರತ ಸರ್ಕಾರವು ಜಿಲ್ಲಾ ಕೈಗಾರಿಕಾ ಕೇಂದ್ರಗಳನ್ನು ಸ್ಥಾಪಿಸಿದ್ದು

A) 1942ರಲ್ಲಿ

B) 1945ರಲ್ಲಿ

C) 1978ರಲ್ಲಿ

D) 1984ರಲ್ಲಿ

**II. ಈ ಪ್ರತಿಯೊಂದು ಪ್ರಶ್ನೆಗೂ ಒಂದು ವಾಕ್ಯದಲ್ಲಿ ಉತ್ತರಿಸಿ: 8x1=8**

9. ಮಹಲ್ವಾರಿ ಪದ್ಧತಿಯನ್ನು ಯಾರು ಜಾರಿಗೆ ತಂದರು?

10. ಹಿಟ್ಲರನು ಬೂದು ಅಂಗಿ ದಳವನ್ನು ಏಕೆ ಸಂಘಟಿಸಿದನು?

11. ಐರೋಪ್ಯ ಒಕ್ಕೂಟದ ಕೇಂದ್ರ ಕಛೇರಿ ಎಲ್ಲಿದೆ?

12. ಭಾರತ ಸಂವಿಧಾನದ 17ನೇ ವಿಧಿಯ ಮಹತ್ವವೇನು?

13. ಕೈಗಾ ವಿರೋಧಿ ಚಳವಳಿಯನ್ನು ಏಕೆ ಪ್ರಾರಂಭಿಸಲಾಯಿತು?

14. ಬೆಂಗಳೂರನ್ನು ಭಾರತದ 'ಸಿಲಿಕಾನ್ ಕಣಿವೆ' ಎಂದು ಏಕೆ ಕರೆಯುತ್ತಾರೆ?

15. ತೆರಿಗೆ ಎಂದರೇನು?

16. ಬ್ಯಾಂಕುಗಳು ಹೇಗೆ ಠೇವಣಿದಾರರು ಮತ್ತು ಸಾಲಗಾರರ ನಡುವಿನ ಸಂಪರ್ಕಕೊಂಡಿಯಾಗಿವೆ.?

**III. ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಎರಡರಿಂದ ನಾಲ್ಕು ವಾಕ್ಯ/ಅಂಶಗಳಲ್ಲಿ ಉತ್ತರಿಸಿ: 8x2=16**

17. ಕೇಂದ್ರ ಲೋಕಸೇವಾ ಆಯೋಗದ ಕಾರ್ಯಗಳನ್ನು ವಿವರಿಸಿ.

**ಅಥವಾ**

ಆಹಾರ ಮತ್ತು ಕೃಷಿಸಂಸ್ಥೆಯ ಉದ್ದೇಶಗಳನ್ನು ವಿವರಿಸಿ.

18. ಬಾಲ್ಯ ವಿವಾಹಗಳನ್ನು ತಡೆಗಟ್ಟಲೇಬೇಕು ಏಕೆ?

**ಅಥವಾ**

ಅಸ್ಪೃಶ್ಯತೆಯು ಒಂದು ಸಾಮಾಜಿಕ ಪಿಡುಗಾಗಿದೆ. ಹೇಗೆ?

19. ಭಾರತವು ಸ್ವಾತಂತ್ರ್ಯಗಳಿಸಿದ ಸಂದರ್ಭದಲ್ಲಿ ಎದುರಿಸಿದ ಸಮಸ್ಯೆಗಳನ್ನು ತಿಳಿಸಿ.

20. ಭಾರತದಲ್ಲಿ ಬ್ರಿಟಿಷರು ತಮ್ಮ ಸಾಮ್ರಾಜ್ಯ ವಿಸ್ತರಣೆಗೆ ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಯನ್ನು ಒಂದು ಅಸ್ತ್ರವಾಗಿ ಬಳಸಿದರು. ಸಮರ್ಥಿಸಿ.

21. ಸಾರ್ವಕಾಲಿಕ ಕಾಲುವೆ ಮತ್ತು ಪ್ರವಾಹ ಕಾಲುವೆಗಳ ನಡುವಿನ ವ್ಯತ್ಯಾಸಗಳಾವುವು?

22. ಭಾರತದ ಬೆಳೆ ಋತುಗಳನ್ನು ಪಟ್ಟಿಮಾಡಿ.

23. ಸುಗ್ಗಿಪೂರ್ವ ತಂತ್ರಜ್ಞಾನವು ಸುಗ್ಗಿನಂತರದ ತಂತ್ರಜ್ಞಾನಕ್ಕಿಂತ ಹೇಗೆ ಭಿನ್ನವಾಗಿದೆ?

24. ಗ್ರಾಹಕರನ್ನು ಹೇಗೆ ಶೋಷಿಸಲಾಗುತ್ತಿದೆ?

**IV. ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಆರು ವಾಕ್ಯ/ಅಂಶಗಳಲ್ಲಿ ಉತ್ತರಿಸಿ: 9x3=27**

25. ಡಚ್ಚರ ವಿರುದ್ಧದ ಮಾರ್ತಾಂಡವರ್ಮನ ಹೋರಾಟವನ್ನು ವಿವರಿಸಿ.

**ಅಥವಾ**

ಭಾರತದಲ್ಲಿ ಬ್ರಿಟಿಷ್ ಶಿಕ್ಷಣ ವ್ಯವಸ್ಥೆಯು ಬೀರಿದ ಪರಿಣಾಮಗಳನ್ನು ವಿವರಿಸಿ.

26. ನಿತ್ಯಹರಿದ್ವರ್ಣ ಅರಣ್ಯಗಳು ಹಾಗೂ ಎಲೆ ಉದುರಿಸುವ ಮಾನ್ಸೂನ್ ಅರಣ್ಯಗಳ ನಡುವಿನ ವ್ಯತ್ಯಾಸಗಳೇನು?

**ಅಥವಾ**

ಗ್ಲೋಬಲ್ ಪೊಜಿಶನಿಂಗ್ ಸಿಸ್ಟಂನ ಉಪಯೋಗಗಳೇನು?

27. ಗ್ರಾಮೀಣ ಅಭಿವೃದ್ಧಿಯಲ್ಲಿ ಪಂಚಾಯತ್‌ರಾಜ್ ಸಂಸ್ಥೆಗಳ ಪಾತ್ರವನ್ನು ವಿವರಿಸಿ.

**ಅಥವಾ**

ಸಾರ್ವಜನಿಕ ಹಣಕಾಸಿನ ಮಹತ್ವವನ್ನು ವಿವರಿಸಿ

28. ಬ್ಯಾಂಕ್ ಖಾತೆಯನ್ನು ತೆರೆಯುವುದರಿಂದಾಗುವ ಅನುಕೂಲಗಳಾವುವು?

**ಅಥವಾ**

ಉದ್ಯಮಿಗಳ ಕಾರ್ಯಗಳಾವುವು?

29. ಸಾಮಾಜಿಕ ಸುಧಾರಣೆಗೆ ರಾಜಾರಾಮ್ ಮೋಹನರಾಯರ ಕೊಡುಗೆಗಳನ್ನು ವಿವರಿಸಿ.

30. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಆರ್ಥಿಕ ಕಾರಣಗಳನ್ನು ವಿವರಿಸಿ.

31, ಮಾನವ ಹಕ್ಕುಗಳನ್ನು ಸಂರಕ್ಷಿಸಲು ಭಾರತವು ಹೇಗೆ ಪ್ರಯತ್ನಿಸುತ್ತಿದೆ?

32. ನಿರುದ್ಯೋಗ ಸಮಸ್ಯೆಯನ್ನು ನಿವಾರಿಸಲು ಸರ್ಕಾರಗಳು ಕೈಗೊಂಡಿರುವ ಕ್ರಮಗಳಾವುವು?

33. ಚಂಡಮಾರುತಗಳಿಂದ ಉಂಟಾಗುವ ದುಷ್ಪರಿಣಾಮಗಳನ್ನು ಎದುರಿಸಲು ತೆಗೆದುಕೊಳ್ಳಬೇಕಾದ ಮನ್ನೆಚ್ಚರಿಕೆ ಕ್ರಮಗಳನ್ನು ವಿವರಿಸಿ.

**V. ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಎಂಟು ವಾಕ್ಯ/ಅಂಶಗಳಲ್ಲಿ ಉತ್ತರಿಸಿ: 4x4=16**

34. ಭಾರತದ ಸಾಮಾಜಿಕ ಸುಧಾರಣೆಯಲ್ಲಿ ಡಾ. ಬಿ. ಆರ್ ಅಂಬೇಡ್ಕರ್‌ರವರು ಮಹತ್ವದ ಪಾತ್ರವಹಿಸಿದ್ದಾರೆ. ಸಮರ್ಥಿಸಿ.

**ಅಥವಾ**

ಸ್ವಾಮಿ ವಿವೇಕಾನಂದರು ಭಾರತೀಯ ಸಮಾಜಕ್ಕೆ ನೀಡಿರುವ ಕೊಡುಗೆಗಳು ಸದಾ ಸ್ಮರಣೀಯವಾದವು. ಸಮರ್ಥಿಸಿ.

35. ಕಪ್ಪುಮಣ್ಣು ಜಂಬಿಟ್ಟಿಗೆ ಮಣ್ಣಿಗಿಂತ ಹೇಗೆ ಭಿನ್ನವಾಗಿದೆ?

**ಅಥವಾ**

ಗರಿಷ್ಟ ಪ್ರಮಾಣದ ಸಕ್ಕರೆ ಕೈಗಾರಿಕೆಗಳು ಗಂಗಾನದಿ ಮೈದಾನ ಪ್ರದೇಶದಲ್ಲಿ ಕಂಡುಬರುತ್ತವೆ. ಸಮರ್ಥಿಸಿ.

36. ಬ್ರಿಟಿಷರ ವಿರುದ್ಧದ ದೋಡಿಯಾ ವಾಘನ ಬಂಡಾಯವನ್ನು ವಿವರಿಸಿ.

37. ಭ್ರಷ್ಟಾಚಾರಕ್ಕೆ ಕಾರಣಗಳೇನು?

**VI.** 38. **ನಿಮಗೆ ಒದಗಿಸಿರುವ ಭಾರತದ ನಕ್ಷೆಯಲ್ಲಿ ಇವುಗಳಲ್ಲಿ ಯಾವುದಾದರೂ ಐದನ್ನು ಗುರುತಿಸಿ. 5x1=5**

A. ಮಲಬಾರ್ ತೀರ

B. $82^0$ $30^I$ ಪೂರ್ವ ರೇಖಾಂಶ

C. ಬಂಗಾಳಕೊಲ್ಲಿ

D. ದಾಮೋದರ್ ಯೋಜನೆ

E. ನರೋರ

F. ಕಾಂಡ್ಲ

G. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ

H. ನವಮಂಗಳೂರು

I. ಬರ್ನ್‌ಪುರ್

J. ಕೊಯ್ನ

**ದೃಷ್ಟಿವಿಕಲ ಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ.**

**(ಪ್ರಶ್ನೆ ಸಂಖ್ಯೆ 38ರ ಬದಲಿಗೆ )**

ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳು ಪ್ರಮುಖ ಉದ್ದೇಶಗಳಾವುವು?

**ಅಥವಾ**

ಹಿಮಾಲಯ ಪರ್ವತಗಳಿಂದಾಗುವ ಅನುಕೂಲಗಳಾವುವು?